**ಓ ಎಸ್ ನಂ 31/2015**

**ಪಿ. ಡಬ್ಲ್ಯೂ ಃ 1**

**ದಿಃ 25.01.2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.**

**ಮುಂದುವರೆದ ಪಾಟೀ ಸವಾಲು ಃ ಪ್ರತಿವಾದಿ 2(ಬಿ) ರವರ ಪರ ಶ್ರೀ ಬಿ ಎಸ್ ಎಂ ವಕೀಲರಿಂದ ಃ**

ಪ್ರಸ್ತುತ ದಾವೆ ನಡೆಯಬೇಕಾದರೆ ದಾವಾ ಐಟಂ ನಂಬರ್ 3 ನ್ನು ರಾಜಿ ಮಾಡಿಕೊಂಡು ದಾವಾ ಸ್ವತ್ತುಗಳಿಂದ ಬಿಡುಗಡೆ ಮಾಡಿಸಿರುತ್ತೇನೆ ಎಂದರೆ ಸರಿ. ದಾವಾ ಐಟಂ ನಂಬರ್ 3 ತಾವರೇಕೆರೆ ಹೋಬಳಿಯ ಚನ್ನೇನಹಳ್ಳಿಯಲ್ಲಿ ಇರುವ ಸ್ವತ್ತು ಎಂದರೆ ಸರಿ. ದಾವಾ ಐಟಂ ನಂಬರ್ 1 ಮತ್ತು 2 ಒಟ್ಟು ಕುಟುಂಬದ ಆಸ್ತಿ ಎ ಂದು ದಾವೆಯಲ್ಲಿ ಹೇಳಿರುತ್ತೇನೆ ಎಂದರೆ ಸರಿ. ದಾವಾ ಸ್ವತ್ತುಗಳಲ್ಲಿ ವಿಭಾಗವಾಗದೇ ಇರುವುದರಿಂದ ಉಳಿದ ಪ್ರತಿವಾದಿಗಳಿಗೆ ಹಕ್ಕು ಇರುತ್ತದೆ ಎಂದರೆ ಸೂಚಿಸಿದರೆ ಸಾಕ್ಷಿ ನನಗೆ ಗೊತ್ತಿಲ್ಲ, ನಾವೆಲ್ಲ ಒಟ್ಟಿಗೆ ಇರುತ್ತೇವೆ ಎಂದು ನುಡಿಯುತ್ತಾರೆ. ನನ್ನ ವಾದಪತ್ರದಲ್ಲಿ ವಾದಿ ಮತ್ತು ಪ್ರತಿವಾದಿಗಳಿಗೆ ಇಬ್ಬರಿಗೂ ಸಮಾನವಾದ ಹಕ್ಕು ಇರುತ್ತದೆ ಎಂದು ಹೇಳಿರುವ ವಿಷಯ ಸುಳ್ಳಾಗಿರುತ್ತದೆಯೋ ಎಂದರೆ ಸಾಕ್ಷಿ ಪ್ರತಿವಾದಿಗಳು ಏನು ಮಾಡಿರುತ್ತಾರೋ ನನಗೆ ಗೊತ್ತಿಲ್ಲ, ನಾವೆಲ್ಲ ಒಟ್ಟಿಗೆ ಇದ್ದೇವು ಎಂದು ನುಡಿಯುತ್ತಾರೆ.

ನಾನು ಪ್ರತಿವಾದಿ 3, 9 ಮತ್ತು 10 ರವರೊಂದಿಗೆ ರಾಜಿ ಮಾಡಿಕೊಂಡು ಅವರನ್ನು ಈ ದಾವೆಯಿಂದ ಕೈಬಿಟ್ಟಿರುವುದು ತಪ್ಪಾಗಿರುತ್ತದೆ ಎಂದರೆ ಸಾಕ್ಷಿ ಅವರು ನನಗೆ ಹಣ ಕೊಟ್ಟಿರುತ್ತಾರೆ, ನಾನು ಅವರೊಂದಿಗೆ ರಾಜಿ ಆಗಿರುತ್ತೇನೆ ಎಂದ ನುಡಿಯುತ್ತಾರೆ. ನಾನು ಮತ್ತು ನನ್ನ ಸಹೋದರಿಯಾದ ಲಕ್ಷ್ಮಮ್ಮ ನವರು ಅಂದರೆ ಪ್ರತಿವಾದಿ 5 ರವರು ಸೇರಿಕೊಂಡು ಈ ದಾವೆಯನ್ನು ಹೂಡಿರುತ್ತೇವೆ ಎಂದರೆ ಸರಿ.ಪ್ರತಿವಾದಿ 5 ರವರಿಗೆ ನಾನೇ ವಕೀಲರನ್ನು ನೇಮಕ ಮಾಡಿಕೊಟ್ಟಿರುತ್ತೇನೆ ಎಂದರೆ ಸರಿ. 5 ನೇ ಪ್ರತಿವಾದಿಯ ಪ್ರತಿವಾದಪತ್ರದಲ್ಲಿ ಅವರ ಭಾಗದ ಬೆಲೆ ರೂ. 8 ಲಕ್ಷ ಎಂದು ಹೇಳಿರುವ ವಿಚಾರ ನನಗೆ ಗೊತ್ತಿಲ್ಲ.

ಸ.ನಂ. 16 ರ ಐಟಂ ನಂಬರ್ 1 ರ 10 ಗುಂಟೆ ಜಮೀನು ಕೆಂಚರಾಮಯ್ಯ ನವರಿಗೆ ವಿಭಾಗದ ಮುಖಾಂತರ ಬಂದಿರುವ ಸ್ವತ್ತು ಎಂದರೆ ಗೊತ್ತಿಲ್ಲ. ಯಲಚಗುಪ್ಪೆ ರಾಮಪುರ ದಲ್ಲಿ ಇರುವ ಸ.ನಂ. 16 ರಲ್ಲಿ ಇರುವ 2 ಎಕರೆ ಜಮೀನು ವಿಭಾಗದ ಮುಖಾಂತರ ಬಂದಿರುವ ಸ್ವತ್ತು ಎಂದರೆ ಸಾಕ್ಷಿ ಸದರಿ ಸ್ವತ್ತು ಲಕ್ಷ್ಮಣಪ್ಪ ನವರಿಗೆ ಕೊಟ್ಟಿರುತ್ತಾರೆ ಎಂದು ನುಡಿಯುತ್ತಾರೆ. ದಾವಾ ಐಟಂ ನಂಬರ್ 2 ರಲ್ಲಿ 2 ಎಕರೆ ಜಮೀನು ಮುನಿಯಪ್ಪ ನವರಿಗೆ ವಿಭಾಗದ ಮುಖಾಂತರ ಬಂದಿದೆ

ಎಂದರೆ ಎಷ್ಟು ಎಕರೆ ಬಂದಿರುತ್ತದೆ ಎಂದು ನನಗೆ ಗೊತ್ತಿರುವುದಿಲ್ಲ, ಆದರೆ ವಿಭಾಗ ಮಾಡಿಕೊಂಡಿರುವುದು ನಿಜ ಎಂದು ನುಡಿಯುತ್ತಾರೆ. ಯಲಚಗುಪ್ಪೆ ಯಲ್ಲಿ ಸ.ನಂ. 18/1 ರಲ್ಲಿ 1 ಎಕರೆ 38 ಗುಂಟೆ ಜಮೀನನ್ನು ನಾನು ಮತ್ತು ಪ್ರತಿವಾದಿಗಳು ಸೇರಿ ಮಾರಿರುತ್ತೇವೆ ಎಂದರೆ ಸಾಕ್ಷಿ ಪ್ರತಿವಾದಿಗಳು ಮಾರಿರುತ್ತಾರೆ, ನನ್ನನ್ನು ಸಹಿ ಮಾಡು ಎಂದು ಹೇಳಿದ್ದಕ್ಕೆ ನಾನು ಸದರಿ ದಾಖಲಾತಿಗೆ ಸಹಿ ಮಾಡಿರುತ್ತೇನೆ ಎಂದು ನುಡಿಯುತ್ತಾರೆ. ಆ ಸಮಯದಲ್ಲಿ ನಾನು ಹಣ ಪಡೆದಿರುವುದಿಲ್ಲ, ನನ್ನ ತಂದೆ ತಾಯಿಗೆ ಹುಷಾರು ಇಲ್ಲದೇ ಇದ್ದ ಕಾರಣ ನಾನು ಆ ಸಮಯದಲ್ಲಿ ಸಹಿ ಮಾಡು ಎಂದರು, ಮತ್ತು ನಾನು ಸಹಿ ಮಾಡಿರುತ್ತೇನೆ. ನಾನು ಆ ಕ್ರಯಪತ್ರವನ್ನು ಸಹಿ ಮಾಡುವಾಗ ರೂ. 2 ಲಕ್ಷ ಚೆಕ್ ನ ಮುಖಾಂತರ ಮತ್ತು ರೂ. 3 ಲಕ್ಷವನ್ನು ನಗದಿನ ರೂಪದಲ್ಲಿ ಪಡೆದಿರುತ್ತೇನೆ ಎಂದರೆ ಸರಿಯಲ್ಲ. ಸದರಿ ದಾಖಲಾತಿಗಳನ್ನು ನ್ಯಾಯಾಲಯದ ಮುಂದೆ 2 ನೆ ಪ್ರತಿವಾದಿ ಹಾಜರು ಪಡಿಸಿದರೆ ನನಗೆ ಯಾವುದೇ ತಕರಾರು ಇರುವುದಿಲ್ಲ. ನಾನು ಸಹಿ ಮಾಡಿದ ದಾಖಲಾತಿಗೆ ಲಕ್ಷ್ಮಮ್ಮ ನವರು ಸಹಿ ಮಾಡಿರುತ್ತಾರೆ ಎಂದರೆ ಸರಿ.

ಸ.ನಂ. 18/1 ಯಲಚಗುಪ್ಪೆ ಜಮೀನನ್ನು ಈ ದಾವೆಯಲ್ಲಿ ಯಾವ ಕಾರಣಕ್ಕೆ ಸೇರಿಸಿರುವುದಿಲ್ಲ ಎಂದರೆ ಸಾಕ್ಷಿ ನಾನು ಸಹಿ ಮಾಡಿರುತ್ತೇನೆ, ಆದ್ದರಿಂದ ಅದನ್ನು ಈ ದಾವೆಯಲ್ಲಿ ಸೇರಿಸಿರುವುದಿಲ್ಲ. ಸದರಿ ಜಮೀನು ಮಾರಿದಾಗ ನಾನು ಅರ್ಧಭಾಗ ಹಣ ಪಡೆದು, ಮತ್ತರ್ಧ ಭಾಗ ಲಕ್ಷ್ಮಮ್ಮ ನವರು ಪಡೆದಿದ್ದ ಕಾರಣ ನಾನು ಈ ದಾವೆಯಲ್ಲಿ ಆ ಜಮೀನನ್ನು ಸೇರಿಸಿರುವುದಿಲ್ಲ ಎಂದರೆ ಸರಿಯಲ್ಲ, ಆ ಜಮೀನನ್ನು ಯಾವ ವರ್ಷದಲ್ಲಿ ಮಾರಾಟ ಮಾಡಿದ್ದೇನೆಂದು ಈಗ ಹೇಳಲಾಗುವುದಿಲ್ಲ. ಸದರಿ ಜಮೀನನ್ನು 2003-04 ರಲ್ಲಿ ನಾನು ಮಾರಾಟ ಮಾಡಿರುತ್ತೇನೆ ಎಂದರೆ ಗೊತ್ತಿಲ್ಲ. ಆ ಸಮಯದಲ್ಲಿ ಪ್ರತಿವಾದಿಗಳ ನಡುವೆ ವಿಭಾಗವಾಗಿರುತ್ತದೆ ಎಂದರೆ ಗೊತ್ತಿಲ್ಲ. ವಿಭಾಗವಾದ ನಂತರ ಪ್ರತಿವಾದಿಗಳ ಹೆಸರಿಗೆ ಖಾತೆ ಪಹಣಿ ಬದಲಾವಣೆಯಾಗಿರುತ್ತದೆ ಎಂದರೆ ಗೊತ್ತಿಲ್ಲ. ನಿ ಪಿ 4 ಪಹಣಿಯಲ್ಲಿ ವಿಭಾಗದಲ್ಲಿ ಯಾರ್ಯಾರಿಗೆ ಎಷ್ಟು ಜಮೀನು ಬಂದಿರುತ್ತದೆ ಎಂದು ತೋರಿಸಲಾಗಿರುತ್ತದೆ ಎಂದರೆ ಗೊತ್ತಿಲ್ಲ. ನಿ ಪಿ 4 ರಲ್ಲಿ ಎಂ ಆರ್ 9/2004-05 ರಂತೆ ವಿಭಾಗವಾಗಿರುವ ಬಗ್ಗೆ ನಮೂದು ಇರುತ್ತದೆ ಎಂದರೆ ಗೊತ್ತಿಲ್ಲ.

ನಾನು 5 ನೆ ತರಗತಿಯವರೆಗೂ ಓದಿರುತ್ತೇನೆ. ನನಗೆ ಕನ್ನಡ ಓದಲು ಬರೆಯಲು ಬರುವುದಿಲ್ಲ. ನನಗೆ ಸಹಿ ಮಾಡಲು ಬರುತ್ತದೆ. ಬೇರೆ ಇನ್ನೇನು ಬರುವುದಿಲ್ಲ. ದಾವಾ ಪತ್ರದಲ್ಲಿ ಆಂಗ್ಲ ಭಾಷೆಯಲ್ಲಿ ಬರೆದಿರುವ ಕಾರಣ ನನಗೆ ಏನು ಬರೆದಿರುತ್ತದೆ ಎಂದು ಗೊತ್ತಿರುವುದಿಲ್ಲ ಎಂದರೆ ಸಾಕ್ಷಿ ನಾನು ನಮ್ಮ ವಕೀಲರಿಗೆ ವಿಷಯವನ್ನು ತಿಳಿಸಿರುತ್ತೇನೆ, ಅವರು ಅದರಲ್ಲಿ ಏನು ಬರೆದಿರುತ್ತಾರೋ ಗೊತ್ತಿಲ್ಲ ಎಂದು ಹೇಳುತ್ತಾರೆ. ನನ್ನ ತಾಯಿ ಬೈಲಮ್ಮ ನವರು ಏನು ಕೆಲಸ

ಮಾಡುತ್ತಿರಲಿಲ್ಲ, ಮನೆಯಲ್ಲಿಯೇ ಇರುತ್ತಿದ್ದರು ಎಂದರೆ ಸರಿ. ಸ.ನಂ. 18/1 ರ ಖರೀದಿ ಮಾಡುವ ಸಮಯದಲ್ಲಿ ನನ್ನ ತಾಯಿಯ ಹತ್ತಿರ ಹಣ ಇರಲಿಲ್ಲ, ಮುನಿಯಪ್ಪ ನವರು ಖರೀದಿ ಮಾಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ.

ಮುನಿಯಪ್ಪ ನವರು ಸರ್ಕಾರಿ ಕೆಲಸದಲ್ಲಿದ್ದರು ಎಂದರೆ ಸರಿ. ಮುನಿಯಪ್ಪ ನವರಿಗೆ ಹೆಚ್ಚಿನ ಆದಾಯ ಇತ್ತು ಎಂದರೆ ಸರಿ. ಮುನಿಯಪ್ಪ ನವರು ಆದಾಯದಿಂದ ಸ.ನಂ.18/1 ನ್ನು ಅವರ ತಾಯಿಯ ಹೆಸರಿನಲ್ಲಿ ಖರೀದಿ ಮಾಡಿದ್ದರು ಎಂದರೆ ಸರಿಯಲ್ಲ. ನಾವು ಹುಟ್ಟುವ ಮೊದಲೇ ಅದನ್ನು ಖರೀದಿ ಮಾಡಿರುತ್ತಾರೆ ಎಂದು ನುಡಿಯುತ್ತಾರೆ. ಸದರಿ ಜಮೀನನ್ನು ಎಷ್ಟನೇ ಇಸವಿಯಲ್ಲಿ ಖರೀದಿ ಮಾಡಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ನಾನು ಭಾಗ ಕೇಳಿದ ಕಾರಣ ಸ.ನಂ. 18/1 ರ ಜಮೀನನ್ನು ನನಗೆ ಅರ್ಧ ಮತ್ತು ಲಕ್ಷ್ಮಮ್ಮ ನಿಗೆ ಅರ್ಧ ಜಮೀನನ್ನು ಮಾರಾಟ ಮಾಡಿ ಹಣವನ್ನು ನೀಡಿರುತ್ತಾರೆ ಎಂದರೆ ಸರಿಯಲ್ಲ. ನಾನು ಸದರಿ ಜಮೀನು ಮಾರಾಟ ಮಾಡಿದ ಹಣವನ್ನು ಪಡೆಯುವಾಗ ಕುಟುಂಬದಲ್ಲಿ ಭಾಗಾಂಶ ಕೇಳುವುದಿಲ್ಲ ಎಂದು ಪ್ರಮಾಣ ಮಾಡಿರುತ್ತೇನೆ ಎಂದರೆ ಸರಿಯಲ್ಲ, ನಾನು ಪ್ರಮಾಣ ಮಾಡಿದ ನಂತರ ಅಣ್ಣ ತಮ್ಮಂದಿರು ವಿಭಾಗ ಮಾಡಿಕೊಂಡಿರುತ್ತಾರೆ ಎಂದರೆ ಸರಿಯಲ್ಲ.

ನಮ್ಮ ತಂದೆ ತೀರಿಕೊಂಡು 5 ವರ್ಷಗಳಾಗಿರಬಹುದು. ನಾನು ಪ್ರತಿವಾದಿ 9 ಮತ್ತು 10 ರವರ ಜೊತೆ ರಾಜಿ ಮಾಡಿಕೊಂಡಾಗ ನನ್ನ ತಂದೆ ಬದುಕಿರಲಿಲ್ಲ ಎಂದರೆ ಸರಿ. ದಾವಾ ಐಟಂ ನಂಬರ್ 1 ರಲ್ಲಿ ಸ್ವತ್ತುಗಳಲ್ಲಿ ಇರುವ ನನ್ನ ಹಕ್ಕನ್ನು ನಾನು ದಿನಾಂಕ : 6.12.2017 ರಲ್ಲಿ ಲಕ್ಷ್ಮಣಪ್ಪ ಮತ್ತು ಅವರ ಮಕ್ಕಳಿಗೆ ನಿವೃತ್ತಿ ಪತ್ರವನ್ನು ಬರೆದುಕೊಟ್ಟಿರುತ್ತೇನೆ ಎಂದರ ಸರಿ, **ಸಾಕ್ಷಿ ಸದರಿ ನಿವೃತ್ತಿ ಪತ್ರವನ್ನು ತೋರಿಸಲಾಗಿ ಸಾಕ್ಷಿ ಅದನ್ನು ಗುರುತಿಸಿದ ಮೇರೆಗೆ ಅದನ್ನು ನಿಡಿ 1 ಎಂದು ಗುರುತಿಸಲಾಯಿತು.**

ನಾನು ಹಕ್ಕು ನಿವೃತ್ತಿ ಪತ್ರ ನಿ ಡಿ 1 ರಂತೆ ಬರೆದುಕೊಟ್ಟ ನಂತರ ಲಕ್ಷ್ಮಣಪ್ಪ ಮತ್ತು ಅವರ ಮಕ್ಕಳು ಸದರಿ ಜಮೀನಿನಲ್ಲಿ ಲೇಔಟ್ ಮಾಡಿ, ನಿವೇಶನಗಳನ್ನು ವಿಂಗಡಣೆ ಮಾಡಿ, ಮಾರಾಟ ಮಾಡಿರುತ್ತಾರೆ ಎಂದರೆ ಸರಿ. **ಸಾಕ್ಷಿಗೆ ಈಗ ಒಂದು ನಿವೇಶನದ ಕ್ರಯಪತ್ರವನ್ನು ತೋರಿಸಲಾಗಿ ಸಾಕ್ಷಿ ಅದನ್ನು ಗುರುತಿಸಿದ ಮೇರೆಗೆ ಅದನ್ನು ನಿಡಿ 2 ಎಂದು ಗುರುತಿಸಲಾಯಿತು.** ನನ್ನ ಭಾಗಕ್ಕೆ ಬರಬೇಕಾದ ಹಣಕ್ಕಿಂತ ಹೆಚ್ಚಿನ ಹಣವನ್ನು ನಾನು ಪಡೆದುಕೊಡಿರುತ್ತೇನೆ ಎಂದರೆ ಸಾಕ್ಷಿ ನಾನು ಲಕ್ಷ್ಮಣಪ್ಪ ನವರ ಹತ್ತಿರ ಹಣ ಪಡೆದಿರುತ್ತೇನೆ ಎಂದು ನುಡಿಯುತ್ತಾರೆ. ನನಗೆ ಬರಬೇಕಾದ ಹಣವನ್ನು ನಾನು ಪಡೆದು ಪ್ರತಿವಾದಿಗಳಿಗೆ ಈ ದಾವೆಯನ್ನು ಹೂಡಿ ತೊಂದರೆ ಕೊಡುತ್ತಿದ್ದೇನೆ

ಎಂದರೆ ಸಾಕ್ಷಿ ನಾನು ಕೇವಲ ಲಕ್ಷ್ಮಣಪ್ಪ ನವರ ಹತ್ತಿರ ಹಣವನ್ನು ಪಡೆದಿರುತ್ತೇನೆ, ಇನ್ನು ಉಳಿದ ಪ್ರತಿವಾದಿಗಳ ಹತ್ತಿರ ಪಡೆದಿರುವುದಿಲ್ಲ ಎಂದು ನುಡಿಯುತ್ತಾರೆ. ನಾನು ನನ್ನ ಪ್ರಮಾಣಪತ್ರದಲ್ಲಿ ಸುಳ್ಳು ಮಾಹಿತಿಯನ್ನು ನೀಡಿರುತ್ತೇನೆ ಎಂದರೆ ಸರಿಯಲ್ಲ. ನಾನು ಹೆಚ್ಚಿನ ಹಣ ಪಡೆದಿರುವುದರಿಂದ ನ್ಯಾಯಶುಲ್ಕವನ್ನು ಭರಿಸಲು ನನಗೆ ಯಾವುದೆ ಅಭ್ಯಂತರ ಇರುವುದಿಲ್ಲ ಎಂದರೆ ಸರಿಯಲ್ಲ.

ಸ.ನ. 22/2 ರ 20 ಗುಂಟೆ ಜಮೀನಿನಲ್ಲಿ ರಟ್ಟಿನ ಪ್ಯಾಕ್ಟರಿ ನಡೆಯುತ್ತಿದೆ ಎಂದರೆ ಸರಿ. ಸದರಿ ಪ್ಯಾಕ್ಟರಿಯು 2007 ರಿಂದ ನಡೆಯತ್ತಿದೆ ಎಂದರೆ ಗೊತ್ತಿಲ್ಲ. ಆ ಪ್ಯಾಕ್ಟರಿಯನ್ನು ನಾನು ನೋಡಿರುತ್ತೇನೆ. ಸ.ನಂ. 22/2 ನ್ನು ದಿನಾಂಕ ೩ 2.03.2006 ರಲ್ಲಿ ಮಾರಾಟ ಮಾಡಲಾಗಿತ್ತು ಎಂದರೆ ಗೊತ್ತಿಲ್ಲ. ನಿ ಪಿ 7 ರಂತೆ ನಾನು ಹಾಜರುಪಡಿಸಿರುವ ದಾಖಲಾತಿ ಸುಳ್ಳಾಗಿರುತ್ತದೆಯೋ ಎಂದರೆ ಸರಿಯಲ್ಲ. ದಾವಾ ಸ್ವತ್ತುಗಳು ಅಣ್ಣ ತಮ್ಮಂದಿರ ನಡುವೆ ವಿಭಾಗವಾಗಿದ್ದು ನಾನು ನನಗೆ ಬರಬೇಕಾದ ಹಣವನ್ನು ಪಡೆದಿದ್ದು, ನಾನು ಸುಳ್ಳು ದಾವೆಯನ್ನು ಹೂಡಿ ಸುಳ್ಳು ಸಾಕ್ಷ್ಯವನ್ನು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಪ್ರಕಾರ ಇಬ್ಬರು ಅಣ್ಣ ತಮ್ಮಂದಿರ ನಡುವೆ ವಿಭಾಗವಾಗಿರುವುದಿಲ್ಲ, ಇನ್ನು ಉಳಿದ ಒಬ್ಬ ಅಣ್ಣ ವಿಭಾಗ ಮಾಡಿಕೊಂಡಿರುತ್ತಾರೆ. ಮುನಿಯಪ್ಪ ಮತ್ತು ಕೆಂಚರಾಮಯ್ಯ ನವರ ನಡುವೆ ವಿಭಾಗವಾಗಿರುವುದಿಲ್ಲ. ನಾನು ವಿಭಾಗವಾಗಿರುವುದಿಲ್ಲವೆಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆ ೩ ಇಲ್ಲ**

**(ಉಕ್ತ ಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)**

**ಓ ಹೇ ಕೇ ಸ ಇ ಎ ಓ**

**ಹಿರಿಯ ಶ್ರೇಣಿ ಸಿವಿಲ್ ನ್ಯಾಯಾಧೀಶರು,**

**ಮಾಗಡಿ.**